ಶ್ರೀ ಕೆ.ಶಿವಮೂರ್ತಿ (ಅಬಕಾರಿ ರಾಜ್ಯ ಸಚಿವರು)

ಅ) 28-2-91ರವರೆಗೆ ಹನ್ನರಡು ತಾಲ್ಲೂಕುಗಳಲ್ಲಿ ಮರು ಹರಾಜನ್ನು ನಡೆಸಲಾಗಿದೆ.

ಆ) ಹೌದು.

ಇ) 21.65ಕೋಟಿ ರೂ.ಗಳು.

ನಾಯಕನ ಹಟ್ಟಿಯಲ್ಲಿ ಪೋಲೀಸ್ ಸ್ಟೇಷನ್ ತೆರೆಯುವ ಬಗ್ಗೆ.

1373 - ಶ್ರೀ ಎನ್.ಜಿ.ನಾಯಕ್ (ಮೊಲಕಾಲ್ಮುರು), ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿತ್ರದುರ್ಗ ಜಿಲ್ಲೆಯ ನಾಯಕನಹಟ್ಟಿಯಲ್ಲಿ ಪೋಲೀಸ್ ಸ್ಟೇಷನ್ ತೆರೆಯಬೇಕೆಂದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಯಾವಾಗ ಪೋಲೀಸ್ ಸ್ಟೇಷನ್ನು ತೆರೆಯಲಾಗುವುದು?

ಧರ್ಮಸಿಂಗ್ (ಗೃಹ ಸಚಿವರು) :

ಅ) ಸಧ್ಯಕ್ಕೆ ಯಾವ ಪ್ರಸ್ತಾವನೆ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

Establishment of court at belur.

1339 - Shri B.H.Lakshmanaiah (Belur), will the hon'ble minister for law and social welfare be pleascd to state.

a) Is there any proposal before the government for establishment of court at belur?

b) If so, why it is not started so far?

c) How many cases relating to Belur Taluk are pending in the courts of Hassan and Shakleshpur?

Sri.B.Shivanna (Minister for law and social welfare)

a) Yes

b) Due to financial constaints and nonavailability of suitable building.

c) Information is not readily available. Information will be obtained and furnished.

ಪೋಲೀಸ್ ಠಾಣೆಯ ಬಗ್ಗೆ.

1342 – ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ, (ಬೇಲೂರು) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೇಲೂರು ಪಟ್ಟಣವು ದಿನೇ ದಿನೇ ಬೆಳೆಯುತ್ತಿದ್ದು ಮತ್ತು ಅಂತರರಾಷ್ಟ್ರೀಯ ಪ್ರವಾಸೋದ್ಯಮ ಆಕರ್ಷಿತ ಪಟ್ಟಣವಾಗಿರುವುದರಿಂದ ಪಟ್ಟಣ ಪ್ರದೇಶಕ್ಕೆ ಒಂದು ಪೋಲೀಸ್ ಸ್ಟೇಷನ್ ಮತ್ತು ಮೂರು ಹೋಬಳಿಗಳು ಸೇರಿರುವ ಬೇಲೂರು ಪೋಲೀಸ್ ಸ್ಟೇಷನ್ ಭಾಗ ಮಾಡಿ ಗ್ರಾಮಾಂತರ ಪೋಲೀಸ್ ಠಾಣೆಯೊಂದನ್ನು ಮಾಡಬೇಕೆಂದು ಕೋರಿಕೆ ಸರ್ಕಾರಕ್ಕೆ ಬಂದಿಲ್ಲವೇ?

ಆ) ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಕೊಂಡಿರುವ ಕ್ರಮವೇನು?